# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಶರಣಬಸಪ್ಪ ಎಸ್. ಪೋಲೀಸ್ ಪಾಟೀಲ ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಸೇಡಂ ಇವರ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಬಗ್ಗೆ.

**ಓದಲಾಗಿದೆ:** 1. ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ ಕಲಬುರಗಿ ಇವರ ಪತ್ರ ಸಂಖ್ಯೆ: ಕಾನಿಅ/ಪಂ.ರಾ.ಇಂಇ/ ವಿ.ಕ/ಸಿ-1/ವೈವೆ/2021-22/4512 ದಿ:05.02.2022 ಹಾಗೂ 5069 ದಿನಾಂಕ:24.02.2022

2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 31 ಎಸ್.ಎಂ.ಆರ್. 2014, ದಿನಾಂಕ:05.11.2015.

3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 48 ಎಸ್.ಎಂ.ಆರ್ 2018, ದಿನಾಂಕ:20.05.2019

**ಪ್ರಸ್ತಾವನೆ:**

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ ಕಲಬುರಗಿ ಇವರು ಮೇಲೆ ಕ್ರಮ ಸಂಖ್ಯೆ (1) ರ ದಿ:05.02.2022 ಹಾಗೂ ದಿನಾಂಕ:24.02.2022ರ ಪತ್ರಗಳಲ್ಲಿ ಶ್ರೀ ಶರಣಬಸಪ್ಪ ಎಸ್. ಪೋಲೀಸ್ ಪಾಟೀಲ ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಸೇಡಂ ಇವರು ತಮ್ಮ ಹೃದಯ ಹಾಗೂ ಕಿಡ್ನಿಗೆ ಸಂಬಂಧಿಸಿದ ಚಿಕಿತ್ಸೆಯನ್ನು ದಿನಾಂಕ:22.06.2021 ರಿಂದ 25.06.2021 ರವರೆಗೆ ಸರ್ಕಾರದಿಂದ ಮಾನ್ಯತೆ ಪಡೆಯದ ವಾತ್ಸಲ್ಯ ಲೈಫ್ ಖೂಬಾ ಆಸ್ಪತ್ರೆ ಕಲಬುರಗಿಯಲ್ಲಿ ಹಾಗೂ ದಿನಾಂಕ:26.06.2021 ರಿಂದ 03.07.2021ರ ವರೆಗೆ ಸರ್ಕಾರದಿಂದ ಮಾನ್ಯತೆ ಪಡೆಯದ ಹೊರ ರಾಜ್ಯದ ಆಸ್ಪತ್ರೆಯಾದ ಸನ್‌ಶೈನ್ ಆಸ್ಪತ್ರೆ, ಸಿಕಂದ್ರಾಬಾದ್ ತೆಲಂಗಾಣ ಇಲ್ಲಿ ಪಡೆದಿರುತ್ತಾರೆ. ಸದರಿ ಚಿಕಿತ್ಸೆಗೆ ರೂ. 1,59,646/- ಹಾಗೂ 6,05,770/-ಗಳ ವೆಚ್ಚವಾಗಿರುತ್ತದೆಂದು, ಈ ಪೈಕಿ ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ಕ್ರಮವಾಗಿ ರೂ. ರೂ.14,737/- ಹಾಗೂ ರೂ.1,59,646/-ಗಳನ್ನು ಒಟ್ಟಾರೆ ರೂ. 1,74,383/-ಗಳನ್ನು ಅರ್ಹತಾ ಮೊತ್ತ ವನ್ನು ಪಾವತಿಸಲು ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಸದರಿ ಮೊತ್ತವನ್ನು ಮರುಪಾವತಿಸಲು ಸರ್ಕಾರದ ಅನುಮೋದನೆ ನೀಡುವಂತೆ ರವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ಹಾಗೂ(3) ರ ಸರ್ಕಾರದ ಆದೇಶಗಳಲ್ಲಿ ತಿಳಿಸಿರುವ ಅಂಶಗಳ ಅನ್ವಯ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಶ್ರೀ ಶರಣಬಸಪ್ಪ ಎಸ್. ಪೋಲೀಸ್ ಪಾಟೀಲ ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಸೇಡಂ ಇವರು ತಮ್ಮ ಹೃದಯ ಹಾಗೂ ಕಿಡ್ನಿಗೆ ಸಂಬಂಧಿಸಿದ ಚಿಕಿತ್ಸೆಯನ್ನು ದಿನಾಂಕ:22.06.2021 ರಿಂದ 25.06.2021 ರವರೆಗೆ ಸರ್ಕಾರದಿಂದ ಮಾನ್ಯತೆ ಪಡೆಯದ ವಾತ್ಸಲ್ಯ ಲೈಫ್ ಖೂಬಾ ಆಸ್ಪತ್ರೆ ಕಲಬುರಗಿಯಲ್ಲಿ ಹಾಗೂ ದಿನಾಂಕ:26.06.2021 ರಿಂದ 03.07.2021ರ ವರೆಗೆ ಸರ್ಕಾರದಿಂದ ಮಾನ್ಯತೆ ಪಡೆಯದ ಹೊರ ರಾಜ್ಯದ ಆಸ್ಪತ್ರೆಯಾದ ಸನ್‌ಶೈನ್ ಆಸ್ಪತ್ರೆ, ಸಿಕಂದ್ರಾಬಾದ್ ತೆಲಂಗಾಣ ಇಲ್ಲಿ ಪಡೆದಿರುತ್ತಾರೆ. ಸದರಿ ಚಿಕಿತ್ಸೆಗೆ ರೂ. 1,59,646/- ಹಾಗೂ 6,05,770/-ಗಳ ವೆಚ್ಚವಾಗಿರುತ್ತದೆ ನಿರ್ದೇಶಕರು, ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ಕ್ರಮವಾಗಿ ರೂ. ರೂ.14,737/- ಹಾಗೂ ರೂ.1,59,646/-ಗಳನ್ನು ಒಟ್ಟಾರೆ ರೂ. 1,74,383/-ಗಳನ್ನು ಪಾವತಿಸಲು ಅಭಿಪ್ರಾಯ ನೀಡಿರುವುದರಿಂದ ಸದರಿ ಮೊತ್ತವನ್ನು ಮರು ಪಾವತಿಸಲು ಸರ್ಕಾರವು ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 74 ಜಡ್‌ಪಿಎ 2022 ಬೆಂಗಳೂರು, ದಿನಾಂಕ:28.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 31 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 14 ನ್ನು ಸಡಿಲಿಸಿ, ಪತ್ರದಲ್ಲಿ ಶ್ರೀ ಶರಣಬಸಪ್ಪ ಎಸ್. ಪೋಲೀಸ್ ಪಾಟೀಲ ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಸೇಡಂ ಇವರು ತಮ್ಮ ಹೃದಯ ಹಾಗೂ ಕಿಡ್ನಿಗೆ ಸಂಬಂಧಿಸಿದ ಚಿಕಿತ್ಸೆಯನ್ನು ದಿನಾಂಕ:22.06.2021 ರಿಂದ 25.06.2021 ರವರೆಗೆ ಸರ್ಕಾರದಿಂದ ಮಾನ್ಯತೆ ಪಡೆಯದ ವಾತ್ಸಲ್ಯ ಲೈಫ್ ಖೂಬಾ ಆಸ್ಪತ್ರೆ ಕಲಬುರಗಿಯಲ್ಲಿ ಹಾಗೂ ದಿನಾಂಕ:26.06.2021 ರಿಂದ 03.07.2021ರ ವರೆಗೆ ಸರ್ಕಾರದಿಂದ ಮಾನ್ಯತೆ ಪಡೆಯದ ಹೊರ ರಾಜ್ಯದ ಆಸ್ಪತ್ರೆಯಾದ ಸನ್‌ಶೈನ್ ಆಸ್ಪತ್ರೆ, ಸಿಕಂದ್ರಾಬಾದ್ ತೆಲಂಗಾಣ ಇಲ್ಲಿ ಪಡೆದಿರುವುದನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ಚಿಕಿತ್ಸಾ ವೆಚ್ಚದ ಪೈಕಿ ಮೊತ್ತ ಒಟ್ಟಾರೆ ರೂ. 1,74,383/-ಗಳನ್ನು (ಒಂದು ಲಕ್ಷದ ಎಪ್ಪತ್ನಾಲ್ಕು ಸಾವಿರದ ಮೂರುನೂರ ಎಂಭತ್ತಮೂರು ರೂ.ಗಳು ಮಾತ್ರ) ಅರ್ಹತಾ ಮೊತ್ತವೆಂದು ಮರುಪಾವತಿಸಲು ಸರ್ಕಾರದ ವಿಶೇಷ ಮಂಜೂತಾತಿ ನೀಡಿದೆ.

ಸದರಿ ಕ್ಲೇಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರ ಮೂಲಗಳಿಂದ ಹಿಂಪಡೆದಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

28/03/2022

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
3. ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ ಕಲಬುರಗಿ – ವೈದ್ಯಕೀಯ ವೆಚ್ಚದ ಮೂಲ ಬಿಲ್ಲುಗಳನ್ನು ಲಗತ್ತಿಸಿದೆ. ನೋಂದಣಿ ಅಂಚೆ ಮುಖಾಂತರ.
4. ಶ್ರೀ ಶರಣಬಸಪ್ಪ ಎಸ್. ಪೋಲೀಸ್ ಪಾಟೀಲ ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಸೇಡಂ.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಜಂಟಿ ಕಾರ್ಯದರ್ಶಿಗಳು, (ಆಡಳಿತ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ
3. ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲುಶಾಖಾ ರಕ್ಷಾಕಡತ.